ಅ) ಕೈಮಗ್ಗ ಅಭಿವೃದ್ಧಿ ನಿಗಮದ ರೀತಿಯಲ್ಲಿ ವಿದ್ಯುತ್ ಮಗ್ಗಗಳ ಪ್ರತ್ಯೇಕ ಅಭಿವೃದ್ಧಿ ನಿಗಮ ರಚಿಸುವುದರ ಬಗ್ಗೆ ಅಖಿಲ ಕರ್ನಾಟಕ ದೇವಾಂಗ ಯುವಜನ ವೇದಿಕೆ ಇವರಿಂದ ಸರ್ಕಾರಕ್ಕೆ ಮನವಿ ಬಂದಿರುವುದೇ?

ಆ) ಹಾಗಿದ್ದಲ್ಲಿ, ಈ ಬೇಡಿಕೆಯನ್ನು ಪೂರೈಸಿದರೆ, ದೇವಾಂಗ ಜನಾಂಗಕ್ಕೆ ಅಪಾರ ಆರ್ಥಿಕ ಲಾಭಕರವಾಗುವುದರಿಂದ ಹಾಗೂ ವಿದ್ಯುತ್ ಮಗ್ಗಗಳ ಚಟುವಟಿಕೆ ಅಭಿವೃದ್ಧಿಗೆ ನೆರವಾಗುವುದರಿಂದ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಆಂಗ್ಲೋ ಇಂಡಿಯನ್ ಪಂಗಡದವರಿಗೆ ದೊರೆಯುವ ಸೌಲಭ್ಯಗಳ ಬಗ್ಗೆ

471 - ಶ್ರೀ ಡೇರಿಕ್ ಎಂ. ಫುಲ್ ಇನ್ ಫಾ (ನಾಮ ನಿರ್ದೇಶನ ಹೊಂದಿದವರು) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆಂಗ್ಲೋ ಇಂಡಿಯನ್ ಪಂಗಡದವರಿಗೆ ಯಾವುದಾದರೂ ಯೋಜನೆಯಲ್ಲಿ ಸೌಲಭ್ಯ ದೊರೆಯುವುದೇ?

ಆ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಸದರಿ ಯೋಜನೆಗಳಡಿಯಲ್ಲಿ ಸೌಲಭ್ಯ ಹೊಂದಿದ ಆಂಗ್ಲೋ ಇಂಡಿಯನ್ನರ ಸಂಖ್ಯೆ.

ಇ) ಈ ಯೋಜನೆಯ ಉಪಯೋಗ ಹೊಂದಲು ಸಾಕಷ್ಟು ಅಲ್ಪಸಂಖ್ಯಾತರ ಪಂಗಡದವರುಗಳು ಮುಂದೆ ಬರದಿರುವುದು ನಿಜವೇ, ಹಾಗಿದ್ದಲ್ಲಿ ಇದಕ್ಕೆ ಕಾರಣಕೊಡಿ.

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು)

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆಂಗ್ಲೋ ಇಂಡಿಯನ್ ಪಂಗಡದವರು ಈ ಕೆಳಕಂಡ ಯೋಜನೆಗಳಲ್ಲಿ ಸೌಲಭ್ಯಗಳನ್ನು ಪಡೆಯಬಹುದು.

1. ಸ್ವಾವಲಂಬನ ಯೋಜನೆ.
2. ವಾಹನ ಚಾಲನಾ ತರಬೇತಿ ಯೋಜನೆ
3. ಫೋರ್‌ಮನ್‌ಶಿಪ್ ತರಬೇತಿ ಯೋಜನೆ
4. ಕಂಪ್ಯೂಟರ್ ಟ್ರೈನಿಂಗ್ ಯೋಜನೆ

ಆ) ಆಂಗ್ಲೋ ಇಂಡಿಯನ್ನರನ್ನು ಒಳಗೊಂಡಂತೆ ಸೌಲಭ್ಯಗಳನ್ನು ಪಡೆದುಕೊಂಡಿರುವ ಕ್ರಿಶ್ಚಿಯನ್ ಜನಾಂಗದವರ ವಿವರಗಳು ಕೆಳಕಂಡಂತಿವೆ.

ಸ್ವಾವಲಂಬನೆ ಯೋಜನೆ	360
ವಾಹನ ಚಾಲನಾ ತರಬೇತಿ ಯೋಜನೆ	339
ಫೋರ್‌ಮನ್‌ಶಿಪ್ ತರಬೇತಿ	007
ಕಂಪ್ಯೂಟರ್ ಟ್ರೈನಿಂಗ್	003

ಇ) ನಿಜವಲ್ಲ-ನಿಗಮದ ಎಲ್ಲಾ ಯೋಜನೆಗಳಿಗೂ ಹೆಚ್ಚಿನ ಬೇಡಿಕೆ ಇದ್ದು ಅಲ್ಪಸಂಖ್ಯಾತರ ಪಂಗಡದವರು ಎಲ್ಲಾ ಯೋಜನೆಗಳನ್ನು ಅತ್ಯುತ್ತಮವಾಗಿ ಉಪಯೋಗಿಸಿಕೊಂಡಿರುತ್ತಾರೆ.